# Sampradaya Maduve Hadugalu

**Contributed by Smt.Vijayalakshmi Ravindran**

೧. ರಾಗ ವಲಚಿ – ತಾಳ– ಆದಿ

---------------------------

ಮಂಗಳ ಸ್ನಾನವ ಮಾಡೇಳೋ–ಜಗ
ನ್ಮಂಗಳ ದಾಯಕ ಹರಿಯೇ ದಯಾಳು ।ಪ।

ಸಜ್ಞಾನ ನಾಮವ ಬರದಿಟ್ಟು ಬಹು
ಬಣ್ಣದ ಕುಂಕುಮ ಮಧ್ಯದಲ್ಲಿಟ್ಟು
ಸಣ್ಣಿಟ್ಟು ಕಸ್ತೂರಿ ಬಟ್ಟು ಮಾಡು
ಪುಣ್ಯಾಹ ವಾಚನದ ಪೀತಾಂಬರ ಉಟ್ಟು ।೧।

ದೇವರಿಗೊಂದನೆ ಮಾಡು ಕುಲ
ದೇವತೆ ಸ್ಥಾಪನೆ ಮನೆಯಲಿಮಾಡು
ಕೇವಲ ಲೌಕಿಕ ನೋಡು ಭೂ
ದೇವರಿಗೊಂದಿಸಿ ವರಗಳ ಬೇಡು ।೨।

ನಾನ ದೇಶದಿ ಬಂದ ಜನರು ನಿನ್ನ
ಆನಂದೋತ್ಸವ ವಿದು ನೋಡೆನೆಂಬುವರು
ಸ್ನಾನ ಮಾಡಿಸುವ ಸೇವಕರು
ಆನಂತಾದ್ರೀಶನೆ ಸಿದ್ಧರಾಗಿಹರು ।೩।

೨.ರಾಗ –ಕೇದಾರ ತಾಳ – ಆದಿ

--------------------------

ಮಂಗಳಾರತಿ ಬೆಳಗಿರೇ ಸಾಮಜ ವರದಗೆ ಮಾಮನೋಹರಗೆ ।ಪ।

ಕಾಮನ ಪಿತ ಶ್ಯಾಮವರ್ಣ ಶ್ರೀಹರಿಗೆ
ವಾಮ ದೇವನ ಸಖ ಸೋಮ ವಂದ್ಯ ಹರಿಗೆ ।
ಕಾಮಿನಿ ಸತ್ಯಭಾಮ ಪತಿಗೆ ।ಹೊಸ
ಹೇಮ ದಾರತಿ ಬೆಳಗೀರೆ ।೧।

ಆಗಮ ವೇದ್ಯಗೆ ಭೋಗಿ ಶಯನಗೆ ।
ಬೇಗದಿಂದಲಿ  ಭಕ್ತರ ಪೊರೆವಗೆ ॥
ವಾಗೀಶ ವಂದ್ಯ ಶ್ರೀ ಗುರು ವಿಜಯ ವಿಠಲ।
ಮಂಗಳ ಮಹಿಮ ಶೃಂಗ ಚರಿತ ಹರಿಗೆ ।೨।

೩.ರಾಗ–ಕಾಪಿ    ತಾಳ– ಆದಿ

---

ಬಣ್ಣಿಸಿ ಲಕ್ಷ್ಮಿ ಹರಸಿದಳು
ಎಣ್ಣೆಯ ನೊತ್ತುತ ಯದುಕುಲತಿಲಕಗೆ ।ಪ।

ಆಯುಷ್ಯವಂತನಾಗು ಅತಿ ಬಲ್ಲಿದನಾಗು
ಮಾಯದ ಖಳರ ಮರ್ದನನಾಗು
ರಾಯರ ಪಾಲಿಸು ರಕ್ಕಸರ ಸೋಲಿಸು
ವಾಯುಸುತನಿಗೆ ನೀನೊಡೆಯನಾಗೆನ್ನುತ ।೧।

ಧೀರನು ನೀನಾಗು ಅತಿದಯಾಂಬುಧಿಯಾಗು
ಆ ರುಕ್ಮಿಣಿಗೆ ನೀ ನರಸನಾಗು
ಮಾರನ ಪಿತನಾಗು ಮಧುಸೂದನನಾಗು
ದ್ವಾರಾವತಿಗೆ ನೀ ಧೊರೆಯಾಗೆನ್ನುತ ।೨।

ಆನಂದ ನೀನಾಗು ಅಚ್ಯುತ ನೀನಾಗು
ದಾನವಂತಕನಾಗು ದಯವಾಗು
ಶ್ರೀನಿವಾಸನಾಗು ಶ್ರೀನಿಧಿ ನೀನಾಗು
ಜ್ಞಾನಿ ಪುರಂದರ ವಿಠಲ ನಾಗೆನುತಲಿ ।೩।

೪.ರಾಗ- ಜೈಜೈವಂತಿ ತಾಳ-ಆದಿ

---------------------------

ಶೋಭಾನವೆನ್ನಿರೆ ಸುಂದರ ವೆಂಕಟಗೆ
ಸೌಭಾಗ್ಯವತಿಯರು ರಮಣನಿಗೆ ಮುದದಿಂದ
ಶ್ರೀಭಾಮೆಯರು ಎರೆವರೋ ।ಪ।

ದಾರಕಲಶಕೆ ಸುತ್ತಿ ನೀರು ಓಕುಳಿ ತುಂಬಿ
ವಾರುಣಿಯಿಂದ ಎಳೆ ಮಾವು ಸಹಿತದಿ
ಮೂರು ಮಾಣಿಕ್ಯದ ಹರಳನ್ನು ।೧।

ಪುಂಡರೀಕಾಕ್ಷನ ಶಿರಧಿಕುಂಭವ ತಂದು
ಹೆಂಡತಿ ಶ್ರೀ ದೇವಿ ಹರುಷದಿಂದದಿ ಶ್ರೀ ಹರಿಯ
ಮಂಡೆಗಳಭಿಷೇಕವ ಮಾಡಿದಳು ।೨।

ಕಲಶ ನೀರನು ಎರದು ಕಾಂತಿಯರಾರುತಿಯೆತ್ತಿ
ಬಳಸುತ್ತ ಬೇಗ ಬರುತಿರೆ ವೆಂಕಟನು
ಲಲನೆಯ ಕೈ ಪಿಡಿದು ಎಳಿದನು ।೩।

ಪಂಕಜಾಕ್ಷನ ಫಣೆಗೆ ಬಿಂಕದಿಂದಲಿ ಲಕುಮಿ
ಕುಂಕುಮವನು ಬೇಗ ನೀಡಿದಳು
ಲಕ್ಷ್ಮೀ ಪ್ರಸನ್ನವೆಂಕಟನು ನಗುತಿದ್ದ ।೪।

೫.ರಾಗ–ಹಂಸಾನಂದಿ  ತಾಳ– ಆದಿ

---------------------------

ಅಲಂಕರಿಸಿದಳು ತಾನು ಶ್ರೀ ಹರಿಗೆ
ಜಲಜ ಸಂಭವನ ಪೆತ್ತ ಚಾರುಶಿಖಾಮಣಿಗೆ ।ಪ।

ಪ್ರೀತಿಂದಲಿ ವರ ಪೀತಾಂಬರವ ನುಡಿಸಿ
ನೂತನ ಶಾಲು ಜೋಡಿ ವಿನೋದದಿಂದ ಹೊದಿಸಿದಳು
ಕಾಲಲಂದುಗೆ  ಪೆಂಡೆ ಹಸಲುಕಟಿ ಸೂತ್ರ
ನೀಲ ನಿಭಾಂಗಗೆ ನೆತ್ತಿಲಿ ಕಸ್ತೂರಿ ತಿಲಕ ।೧।

ಕೋಟಿ ಮನ್ಮಥಾಕಾರಗೆ ಕಾಡಿಗೆ ತಿದ್ದಿ ಜಗದಿ
ಸಾಟಿಕಾಣದೆ ಲಕ್ಷ್ಮಿ ದೃಷ್ಟಿಬೊಟ್ಟುನಿಟ್ಟು
ದಿಟ್ಟ ಪ್ರಸನ್ನ ವೆಂಕಟ ವಿಠಲ ಮೂರ್ತಿಗೆ
ಪಟ್ಟ ರಾಣಿ ಲಕುಮಿ ದಿಟ್ಟಿಸಿ ನೋಡುತಲಿ  ।೨।

೬.ರಾಗ– ಖರಹರಪ್ರಿಯ  ತಾಳ–ಆದಿ

-------------------------------

ವೈದಿಕರೆಲ್ಲ ವೇದ ಘೋಷ ಮಾಡುತಿರೆ ।ಪ।

ವೇದಗಮ್ಯನು ವೇದೊಕ್ತ ಮಾರ್ಗದಿ
ವಿಧ ವಿಧ ವಿವಾಹ ಕ್ರಮಗಳ ಮಾಡಿದ ।ಅನುಪ।

ಹಣ್ಣು ತಾಂಬೂಲ ಫಲ ಸುಣ್ಣ ಪೂಸಿದ ಕಲಶ
ಪುಣ್ಯಾಹ ವಾಚನ ಗೊಂಡ ಪೂರ್ಣಾನಂದಮಯನು ।೧।

ಬಲ್ಲ ಭಕ್ತರಿಂದ ಎಲ್ಲ ಕಾರ್ಯವ ಕೊಂಡ
ಫುಲ್ಲಾಕ್ಷ ಮುಕುಂದ ಶ್ರೀ ಮನೋಲ್ಲಾಸನ ।೨।

ಬಿಟ್ಟದ ಹುತ್ತದ ಮೂಲದಿ ಅಷ್ಟವರ್ಗವ ಮಾಡ್ದ
ದಿಟ್ಟ ಪ್ರಸನ್ನವೆಂಕಟ ವಿಠಲ ದೇವನು ।೩।

೭.ರಾಗ– ಬೌಳಿ ತಾಳ– ಆದಿ

-----------------------

ಎಣ್ಣೆಯ ನೊತ್ತಿದರು ಮೀನಾಕ್ಷಿಗೆ ।ಪ।

ಮಾಲೆಂದು ಪಾಲೆಗೆ ಶೀಲದಿ ಲಕುಮಿಗೆ
ಹಾಲಾಲಿ ವೇಣಿಗೆ ಮಲ್ಲಿಗೆ ಹೂವಿಗೆ ।೧।

ಸುಗುಣ ಸಂಪೂರ್ಣೆಗೆ ನಿಗಮಾದಿ ವಿನುತೆಗೆ
ಜಗದೀಶ ನರಸಿಗೆ ಜಾಜಿಯ ಹೂವಿನ ।೨।

ಸುರವರ ಲೀಲೆಗೆ ಕರವೀರ ವಾಸಿಗೆ
ನರಹರಿಲೋಲೆಗೆ ಇರುವಂತಿ ಹೂವಿನ ।೩।

೮–ರಾಗ ಹುಸೇನಿ ತಾಳ ಆದಿ

-----------------------

ನೀರ ನೆರೆದರು ನೀರಜಾಕ್ಷಿಗೆ
ಸಾರ ಭಕತಿಯಲಿ ಮಾರಜನನಿಗೆ ।ಪ।

ಹರಿಯಂಗದಿ ತಾ ವಿರಜೆಯಾಗಿ ಬಂದು

ವರಜೀವರ ಲಿಂಗ ಶರೀರಗಳನೆಲ್ಲ
ತರಿದು ಪರಮ ಪದವ ಭರದಿ ನೀಡುವ
ಸಿರಿ ಭೂದುರ್ಗೆ ಅಂಭ್ರಣಿ ರೂಪಿಗೆ ।೧।

ಸಾನುರಾಗದಲಿ ಶ್ರೀಹರಿಗೆ ನಿತ್ಯ
ನಾ ನಾ ಸೇವೆಯ ನಿರುತ ಗೈಯುವ
ಶ್ರೀನಿವಾಸನ ಪ್ರೀತಿಯ ಸತಿಗೆ
ಮಾನಿನಿಯರು ಬಲು ಪ್ರೇಮದಿಂದಲಿ ।೨।

೯-ರಾಗ ಕರ್ನಾಟಕ ದೇವಗಾಂಧಾರಿ-ತಾಳ ಆದಿ

---

ಅಲಂಕರಿಸಿದರು ಪದ್ಮಾವತಿಯ ಸಖಿಯರೆಲ್ಲರುಕೂಡಿ ।ಪ।
ಮುದ್ದು ಮೋರೆಗೆ ತಕ್ಕ ಮುಕುರ ಬುಲ್ಲಕುಟ್ಟು
ವಜ್ರಧಹರಳು ಮನ ಮೂಗಿನಲಿ ದಿವ್ಯ
ತಿದ್ದಿ ಮುಂಗುರುಳು ಮುತ್ತಿನ ಬೊಟ್ಟು ಕುಂಕುಮ
ಪದ್ಮದ ಹೂವಿನ ಕುಬುಸವ ತೊಡಿಸಿ।೧।

ಸಣ್ಣ ಮುತ್ತಿನ ವಾಲೆ ಸರ್ಪಳಿ ಚಳ ತುಂಬು
ಚಿನ್ನದ ಸರಿಗೆ ಮೋಹನ ಮಾಲೆ
ಕಣ್ಣಿಗೆ ಕಾಡಿಗೆ ಹಚ್ಚಿ ಕಸ್ತೂರಿ ಕುಂಕುಮ
ಚೆನ್ನಾಗಿ ಚೆಲುವೆ ಶ್ರೀ ಮಹಾಲಕ್ಷ್ಮಿಗೆ ।೨।

ತಾಸುರ ಕಾಮಧೇನು ವಿನಂತೆ ಬಂದು
ಭೀಮೇಶ ಕೃಷ್ಣನ ಸಹಿತಾಗಿ
ಲೇಸಾದ ಸಕಲ ಸಂಪತ್ತನೆ ಕೊಟ್ಟು
ತಾವಾಸ ಮಾಡೋಳು ಮನೆಯಲ್ಲಿ ಎಂದು ।೩।

## ೧೦-ರಾಗ ಬಿಲಹರಿ  ತಾಳ ಆದಿ

---

ಬಳೆಯ ನಿಕ್ಕಿದರು ಭೂದೇವಿಗೆ
ಬಳೆಯ ನಿಕ್ಕಿದರು ಶ್ರೀದೇವಿಗೆ ।ಪ।

ಬಳೆಯ ನಿಕ್ಕಿದರು ಶ್ರೀದೇವ ದೇವನ ರಾಣಿಗೆ
ಶೀಲ ಮನಸಿಂದ ಸಾಮಜಗಮನೆಗೆ। ಅನುಪ।

ದೇವ ದೇವನ ಅಂಕದಿ ಒಪ್ಪಿ ನಿತ್ಯದಿ
ದಿವ್ಯವಾದ ತನ್ನ ಕರ ಕಮಲಗಳಿಂದ
ಸಾವಿರ ರೂಪನ ಸೇವ್ವೆಯ ನಿರುತದಿ
ಭಾವಶುದ್ಧಲಿಗೈವ ಶ್ರೀದೇವಿ ಕರಗಳಿಗೆ ।೧।

ಭಕ್ತರ ಭವ ಭಯ ಬಿಡಿಸುತ ನಿರುತದಿ
ಶಕ್ತ ಶ್ರೀಹರಿಯಿಂದ ಒಡಗೂಡಿ ಚರಿಸುತ
ಮುಕ್ತಿಕೇಷನ ಕರುಣಾಮೃತ ಧಾರೆಯ
ಭಕ್ತರಿಗುಣಿಸುವ ಭೂದೇವಿ ಕರಗಳಿಗೆ ॥೨॥

ಸತ್ಯ ದೇವನ ದಿವ್ಯ ಪಾದಕಮಲವನ್ನು
ಎತ್ತಿ ತೊಡೆಯೊಳಿಟ್ಟು ಬಲುಪ್ರೇಮದಿ
ಚಿತ್ತದಿ ನಲಿಯುತ ಶ್ರೀನಿವಾಸನ ಪಾಡಿ
ನಿತ್ಯ ಸೇವಿಪ ಶ್ರೀದುರ್ಗೆ ಕರಗಳಿಗೆ ॥೩॥

## ೧೧-ರಾಗ ಸರಸ್ವತಿ ತಾಲ ಆದಿ

---

ಪಾದವ ತೊಳಿದ ಗಗನ ರಾಜನು ಹರಿಯ ।ಪ।

ಪಾದ ಪದ್ಮವ ತೊಳೆದು ಪದ್ಮಾವತಿಯ ನಿನಗೆ
ಮೋದದಿಂದಲಿ ಕೊಟ್ಟು ವಿವಾಹ ಮಾಳ್ಪನೆಂದು ।ಅನುಪ।

ಚಿನ್ನದಿ ಪಾತ್ರೆಯೊಳು ದಿವ್ಯ ನೀರನು ಧರಣಿ
ಚೆನ್ನಾಗಿ ಸುರಿಯುಲು ಮುದ್ದು ಪಾದಗಳಿಗೆ
ಕನ್ನೆಯರು ಸುತ್ತನೋಡಿ ಕಣ್ ಕಣ್ ಬಿಡುತಲಿರೆ
ತನ್ನ ಕೈಯಿಂದರಾಜ ಮಾನ್ಯ ಶ್ರೀ ವೇಂಕತೇಶನ।೧।

ಉಟ್ಟ ಪೀತಾಂಬರದಿಂದ ಒರಿಸಿ
ಸಂತುಷ್ಟ ಯಿಂದಲಿ ಮನದಿ ಸ್ತುತಿಸುತ
ಎಷ್ಟು ಜನ್ಮದ ಸುಕೃತ ಒಟ್ಟಾಯಿತು ನಮ್ಮ
ಇಷ್ಟ ಪ್ರಸನ್ನ ವೆಂಕಟ ವಿಠಲ ನೊಲಿದ ನೆಂದು ॥೨॥

೧೨-ಹಿಂದೋಳವ್ ತಾಳ ಆದಿ

---------------------

ಇತ್ತನು ರಾಜನು ಒಡವೆ ವಸ್ತುಗಳನು
ಚಿತ್ತ ಜನಯ್ಯ ಶ್ರೀ ಭೂದೇವಿ ಅರಸಗೆ ।ಪ।

ವರದಕ್ಷಿಣೆಯ ಕೋಟಿ ರಾಮ ನಿಷ್ಕಗಳನಿತ್ತ
ವರಹೇಮ ಶತಭಾರ ಮುಕುಟವನು ಇತ್ತ
ಪರಿಪರಿ ರತ್ನಮಯ ಪಟ್ಟೆಉಡುದಾರವಿತ್ತ
ಕೊರಳಿಗದ್ಭುತ ಕಂಠಿಹಾರ ಪದಕವನಿತ್ತ ।೧।

ಕರಕೆ ಕಂಕಣ ದಿವ್ಯಸರಿಗೆ ಮುತ್ತಿನ ಮಾಲೆ

ಹರಳಿಟ್ಟ ಬೆರಳುಂಗುರಗಳನು ಇತ್ತ
ವರಬಾಹು ಪುರಿ ಕರ್ಣಕುಂಡಲ ಚೌಕಳಿ
ಮರಕತ ಮಣಿಬಾವುಲಿಯ ಸಿರಿವರಗೆ ಇತ್ತ ॥೨॥

ಭೂಮಿ ಸ್ವರ್ಣ ಸಾಲಿಗ್ರಾಮ ಸೋಮಗಳನು ಇತ್ತ
ಪ್ರೇಮಖಚಿತ ಶುಭಧಾಮವನು ಇತ್ತ
ವ್ಯೋಮನದಿಯ ತಂದೆ ವೆಂಕಟೇಶ ವಿಠಲಗೆ
ಭೂಮಿ ಪಾಲಕ ತನ್ನ ಪ್ರೇಮ ಸುತೆಯ ಪತಿಗೆ ॥೩॥

೧೩- ರಾಗ ಮಧ್ಯಮಾವತಿ ತಾಲ ಆದಿ

-----------------------------

ಕಟ್ಟಿದ ಮಂಗಳ ಸೂತ್ರವ ದೇವ ।ಪ।

ಘಟ್ಟಿ ಗಂಟು ಹಾಕಿದ ಚಿತ್ರವು -ಪರ
ಮೇಷ್ಟಿ ರುದ್ರಾದ್ಯರ ಸೂತ್ರವ ತಾನು
ಅಷ್ಟು ಕೇಳುತ ಸಂತುಷ್ಟ ಮನಸಿನಿಂದ
ಬೆಟ್ಟದೊಡೆಯ ಜಗಜಗೆಟ್ಟಿ ವೆಂಕಟರಮಣ ।೧।

ತುಂಬುರು ನಾರದರ ಗಾನವು ದಿವ್ಯ
ರಂಭೆ ಊರ್ವಶಿಯರ ನಾಟ್ಯವು -ಅತಿ
ತುಂಬಿದ ಸುರ ಮುನಿ ಪೂತವು-ಮಹಾ
ಸಂಭ್ರಮ ಸಭೆಯಲ್ಲಿ ಕಂಬು ಕಂಧರಗೆ
ಅಂಬರ ವಾಣಿಯು ಜಯ ಜಯ ಜಯವೆನೆ ॥೨॥

ಅಷ್ಟ ಲಕುಮಿಪತಿ ತೋಷದಿ -ತನ್ನ
ಇಷ್ಟ ಸುಜನರ ಮಧ್ಯದಿ ಭವ

ಕೊಟ್ಟು ಕನ್ಯಾಮಣಿ ಕಣಕುಡಿ –ಅದು
ಅಷ್ಟದಶ ವಾದ್ಯಗಳು ಗಟ್ಯಾಗಿ ವೊರೆಯಲು
ತಿಷ್ಟ ಪ್ರಸನ್ನ ವೆಂಕಟವಿಠಲ ರಾಯ ॥೩॥

||ShreeBarathi Ramana Mukhya Pranantargata ShreeKrishnarpanamastu||